# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ: 10** **ಮಾಹೆ: ನವೆಂಬರ್** **ವಿಷಯ: ಪ್ರಥಮ ಭಾಷೆ ಕನ್ನಡ**

| ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| ಮೊದಲನೆಯ ವಾರ | **ಗದ್ಯಪಾಠ–02: ಭಾಗ್ಯ ಶಿಲ್ಪಿಗಳು**<br>➢ ಕೃತಿಕಾರರಾದ ಡಿ ಎಸ್ ಜಯಪ್ಪಗೌಡ ಅವರ ಪರಿಚಯ ಮಾಡಿಕೊಳ್ಳುವರು.<br>➢ ಮರೆಯಲಾರದ ಮಹನೀಯರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ ವಿಶ್ವೇಶ್ವರಯ್ಯ ಅವರ ಸಾರ್ವಜನಿಕ ಸೇವೆಯ ಬಗ್ಗೆ ತಿಳಿಯುವರು<br>➢ ಮೈಸೂರು “ಮಾದರಿ ಮೈಸೂರು” ಆದ ಬಗೆಯನ್ನು ತಿಳಿಯುವರು<br>➢ ಪ್ರಜಾ ಪ್ರತಿನಿಧಿಸಭೆಯ ಮಹತ್ವವನ್ನು ಅರಿಯುವರು<br>➢ ನಾಲ್ವಡಿಯವರು ಜಾರಿಗೆ ತಂದ ಸಾಮಾಜಿಕ ಕಾನೂನುಗಳ ಬಗೆಗೆ ತಿಳಿಯುವರು.<br>➢ ವಿಶ್ವೇಶ್ವರಯ್ಯನವರನ್ನು ಕುರಿತು ನೆಹರೂರವರು ಆಡಿದ ಮಾತಿನ ಅರ್ಥವನ್ನು ತಿಳಿಯುವರು. | ➢ ಶಿಕ್ಷಕರು ವಿದ್ಯಾರ್ಥಿಗಳಿಂದ ಪುಸ್ತಕ ನೋಡಿ ಕೃತಿಕಾರರ ಪರಿಚಯ ಬರೆಸುವುದು.<br>➢ ನಾಲ್ವಡಿ ಕೃಷ್ಣರಾಜ ಒಡೆಯರ್ ಬಾಲ್ಯ ಜೀವನದ ಬಗೆಗೆ ಮಕ್ಕಳಿಂದ ಮಾತನಾಡಿಸುವುದು.<br>➢ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳ ಬಗೆಗೆ ಚರ್ಚೆಯನ್ನು ಏರ್ಪಡಿಸುವುದು ಮತ್ತು ಪಟ್ಟಿ ಮಾಡಿಸುವುದು.<br>➢ ನಾಲ್ವಡಿ ಕೃಷ್ಣರಾಜ ಒಡೆಯ್ ಅವರು ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನು ಪಟ್ಟಿ ಮಾಡಿಸಿ ಚರ್ಚಿಸುವುದು.<br>➢ ವಿಶ್ವೇಶ್ವರಯ್ಯನವರ ಜನ್ಮ ಶತಮಾನೋತ್ಸವ ಕಾರ್ಯಕ್ರಮವು ಬೆಂಗಳೂರಿನಲ್ಲಿ ನಡೆದ ರೀತಿಯನ್ನು ಮತ್ತು ಅಲ್ಲಿ ನಡೆದ ಚರ್ಚೆಯ ವಿಷಯದೊಂದಿಗೆ ವಿಶ್ವೇಶ್ವರಯ್ಯನವರ ದಕ್ಷ ಆಡಳಿತದ ಬಗೆಗೆ ಮಕ್ಕಳಿಗೆ ತಿಳಿಸುವುದು. | ➢ ಡಿ.ಎಸ್ ಜಯಪ್ಪ ಗೌಡ ಅವರ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ<br>➢ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಹೆಸರೇನು?<br>➢ ಪ್ರಜಾಪ್ರತಿನಿಧಿ ಸಭೆಯಲ್ಲಿ ಎಷ್ಟು ಸದಸ್ಯರಿದ್ದರು?<br>➢ ನ್ಯಾಯ ವಿಧಾಯಕ ಸಭೆಯನ್ನು ಎಷ್ಟನೇ ಇಸವಿಯಲ್ಲಿ ಸ್ಥಾಪಿಸಲಾಯಿತು?<br>➢ ವಿಶ್ವೇಶ್ವರಯ್ಯನವರ ಬಗೆಗೆ ಪ್ರಧಾನಿ ನೆಹರೂ ರವರು ಆಡಿದ ಮಾತುಗಳು ಯಾವುವು?<br>➢ ವಿಶ್ವೇಶ್ವರಯ್ಯನವರ ತಂದೆ ಮತ್ತು ತಾಯಿಯ ಹೆಸರೇನು? |
| ಎರಡನೇ ವಾರ | ➢ ವಿಶ್ವೇಶ್ವರಯ್ಯನವರ ಜನ್ಮಸ್ಥಳ, ಬಾಲ್ಯ, ಶಿಕ್ಷಣದ ಬಗೆಗೆ ಅರಿಯುವರು. | ➢ ವಿಶ್ವೇಶ್ವರಯ್ಯನವರ ಪೂರ್ವಜರು ಮತ್ತು ಮನೆತನದ ಬಗೆಗೆ, ಶಿಕ್ಷಣದ ವಿಚಾರವಾಗಿ ಚರ್ಚಿಸುವುದು. | ➢ ವಿಶ್ವೇಶ್ವರಯ್ಯನವರು ಯಾವ ಪ್ರಾಂತ್ಯದಲ್ಲಿ ಸಹಾಯಕ |

| | | | |
|---|---|---|---|
| | ➢ ವಿಶ್ವೇಶ್ವರಯ್ಯನವರು ಎಂಜಿನಿಯರ್ ಆಗಿ ಸೇವೆ ಆರಂಭಿಸಿದ ಬಗ್ಗೆ ತಿಳಿಯುವರು<br><br>➢ ವಿಶ್ವೇಶ್ವರಯ್ಯನವರ ಕೊಡುಗೆಗಳನ್ನು ವಿವರವಾಗಿ ತಿಳಿದುಕೊಳ್ಳುವರು . | ➢ ವಿಶ್ವೇಶ್ವರಯ್ಯನವರು ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿ ಮಾಡಿದ ಕಾರ್ಯಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು.<br><br>➢ ವಿಶೇಶ್ವರಯ್ಯನವರು ಮೈಸೂರು ಪ್ರಾಂತ್ಯದ ಮುಖ್ಯ ಎಂಜಿನಿಯರ್ ಹಾಗು ಮೈಸೂರು ಸಂಸ್ಥಾನದ ದಿವಾನರಾಗಿ ಮಾಡಿದ ಕಾರ್ಯಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು | ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದರು?<br><br>➢ ವಿಶ್ವೇಶ್ವರಯ್ಯನವರು ಕೈಗಾರಿಕೆಯ ಬಗೆಗೆ ಆಡಿದ ಘೋಷಣೆ ಯಾವುದು? ಅಭ್ಯಾಸದ ಹಾಳೆ 1. 2 |
| | ➢ ಲೇಖನ ಚಿಹ್ನೆಗಳು: | ➢ ವಿದ್ಯಾರ್ಥಿಗಳಿಗೆ ಲೇಖನ ಚಿಹ್ನೆಗಳ ಬಗೆಗೆ ಉದಾಹರಣೆ ಸಹಿತ ವಿವರಣೆ ನೀಡುವುದು. | |
| | **ಪದ್ಯ ಪಾಠ: 04**<br>**ಕೌರವೇಂದ್ರನ ಕೊಂದೆ ನೀನು**<br>➢ ಕೃತಿಕಾರರ ಪರಿಚಯವನ್ನು ತಿಳಿಯುವರು. | ➢ ಕವಿಯ ಪರಿಚಯವನ್ನು ಯೂ–ಟ್ಯೂಬ್ ಲಿಂಕನ್ನು ಬಳಸಿಕೊಂಡು ಪರಿಚಯಿಸುವುದು. ಧ್ವನಿ ಮುದ್ರಣದ ಸಹಾಯದಿಂದ ಪದ್ಯವನ್ನು ಕೇಳಿಸುವುದು. ಸಾಧ್ಯವಾದಲ್ಲಿ ಶಿಕ್ಷಕರೇ ಹಾಡುವುದು /ಹಾಡಿಸುವುದು. | ➢ ಕುಮಾರವ್ಯಾಸನ ಆರಾಧ್ಯ ದೈವ ಯಾವುದು? |
| | ➢ ಪದ್ಯದ ಆಶಯ ಭಾವವನ್ನು ಅಭಿವ್ಯಕ್ತಿಸುವರು | ➢ ವಿದ್ಯಾರ್ಥಿಗಳಿಗೆ ಪದ್ಯದ ಆಶಯಭಾವವನ್ನು ತಿಳಿಸುವುದು. ಪದ್ಯದ ಪೂರ್ವ ಕಥೆಯನ್ನು ಮಕ್ಕಳು ಓದಿ ತಿಳಿಯುವರು. | ➢ ಅರ್ಜುನನಿಗೆ ಸಮಾನಾದಂತಹ ಬಲಶಾಲಿ ಯಾರು? |
| ಮೂರನೆಯ ವಾರ | ➢ ಕೃಷ್ಣನು ಕರ್ಣನ ಮನದಲಿ ಬಿತ್ತಿದ ಭಯದ ಬಗ್ಗೆ, ಕುಂತಿ ಮತ್ತು ಮಾದ್ರಿಯರು ಮಕ್ಕಳನ್ನು ಪಡೆದ ಬಗ್ಗೆ ಅರಿಯುವರು. | ➢ ಕ್ಲಿಷ್ಟಪದಗಳ ಅರ್ಥವನ್ನು ಪಟ್ಟಿ ಮಾಡಿಸುವ ಮೂಲಕ ಮೊದಲ ಐದು ಚರಣಗಳ ಸಾರಾಂಶವನ್ನು ತಿಳಿಸುವುದು. | ➢ ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು? |
| | ➢ ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳ ಬಗ್ಗೆ ಹಾಗು ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವನ್ನು ಪ್ರಶಂಸಿಸುವರು. | ➢ ಕ್ಲಿಷ್ಟಪದಗಳ ಅರ್ಥವನ್ನು ಪಟ್ಟಿ ಮಾಡಿಸುವ ಮೂಲಕ ಕೊನೆಯ ಐದು ಚರಣಗಳ ಸಾರಾಂಶವನ್ನು ತಿಳಿಸುವುದು. | ➢ ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು? |
| | **ವ್ಯಾಕರಣಾಂಶ:**<br>➢ ಛಂದಸ್ಸು:– ಷಟ್ಪದಿಗಳು | ➢ ವಿದ್ಯಾರ್ಥಿಗಳಿಂದ ಛಂದಸ್ಸು– ಷಟ್ಪದಿಗಳಲ್ಲಿನ ಭಾಮಿನಿ ಷಟ್ಪದಿಯ ಬಗೆಗೆ ಪರಿಚಯಿಸಿ, ಪ್ರಸ್ತಾರ, ಗಣ ವಿಂಗಡನೆ ಮತ್ತು ಷಟ್ಪದಿಯ ಹೆಸರನ್ನು ಬರೆಸುವುದು. | ➢ ಷಟ್ಪದಿಯಲ್ಲಿ ಎಷ್ಟು ಸಾಲುಗಳಿರುತ್ತವೆ? ಅಭ್ಯಾಸದ ಹಾಳೆ 3.4 |

| | | | |
|---|---|---|---|
| ನಾಲ್ಕನೇ ವಾರ | **ಪತ್ಯಪೋಷಕ ಅಧ್ಯಯನ:**<br>**01. ವಸಂತ ಮುಖ ತೋರಲಿಲ್ಲ**<br>➢ ಮಹಿಳೆಯರ ಶೋಷಣೆಯ ಬಗ್ಗೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಅರಿಯುವರು | ➢ ಮಕ್ಕಳಿಂದ ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆ ಮತ್ತು ದೌರ್ಜನ್ಯದ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವುದು. | ➢ ಸರ್ವರ ಏಳಿಗೆ ಹೇಗೆ ಸಾಧ್ಯ ಎಂದು ವಿಜಯಶ್ರೀ ಸಬರದ ಹೇಳಿದ್ದಾರೆ? |
| | ➢ ಪುಟ್ಟಪೋರಿ ಮಾಡುತ್ತಿರುವ ಕೆಲಸದ ಬಗ್ಗೆ, ಬಾಲ ರವಿ ಸೊರಗಿದ ಬಗ್ಗೆ, ಪುಟ್ಟಪೋರಿಯ ಅಮ್ಮ ಮಲಗಿರುವ ಬಗ್ಗೆ ಮತ್ತು ವಸಂತ ಮುಖ ತೋರದ ಬಗ್ಗೆ ಅರಿಯುವುದು. | ➢ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಪುಟ್ಟಪೋರಿಯು ಅನುಭವಿಸುತ್ತಿದ್ದ ಸಂಕಷ್ಟಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು. | ➢ ಪುಟ್ಟಪೋರಿ ಏನು ಮಾಡುತ್ತಿದ್ದಾಳೆ?<br>➢ ಗುಡಿಸಲೊಳಗೆ ಬರಲು ಹೆದರಿದವರು ಯಾರು? |

ಗದ್ಯಪಾಠ ಭಾಗ್ಯಶಿಲ್ಪಿಗಳು ಪಾಠದ ಲಿಂಕ್ ಭಾಗ - 1

https://www.youtube.com/watch?v=fbSagQ14yqU

ಗದ್ಯಪಾಠ ಭಾಗ್ಯಶಿಲ್ಪಿಗಳು ಪಾಠದ ಲಿಂಕ್ ಭಾಗ – 2

https://www.youtube.com/watch?v=kDGfvDluzZI

ಗದ್ಯಪಾಠ ಭಾಗ್ಯಶಿಲ್ಪಿಗಳು ಪಾಠದ ಲಿಂಕ್ ಭಾಗ – 3

https://www.youtube.com/watch?v=tXahnbv6PxM

ಪದ್ಯಪಾಠ ಕೌರವೇಂದ್ರನ ಕೊಂದೆ ನೀನು ಪಾಠದ ಲಿಂಕ್ ಭಾಗ -1

https://www.youtube.com/watch?v=ZEm_e0iDYHo

ಪದ್ಯಪಾಠ ಕೌರವೇಂದ್ರನ ಕೊಂದೆ ನೀನು ಪಾಠದ ಲಿಂಕ್ ಭಾಗ -2

https://www.youtube.com/watch?v=cptUMm3GsQI

ಪದ್ಯಪಾಠ ಕೌರವೇಂದ್ರನ ಕೊಂದೆ ನೀನು ಪಾಠದ ಲಿಂಕ್ ಭಾಗ -3

https://www.youtube.com/watch?v=UhME8CKI1c8

## ಗದ್ಯ ಭಾಗ~04 ಭಾಗ್ಯಶಿಲ್ಪಿಗಳು ಅಭ್ಯಾಸ ಹಾಳೆ–01

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ನಾಲ್ವಡಿ ಕೃಷ್ಣರಾಜ ಒಡೆಯರ ರೀಜೆಂಟರಾಗಿ ಆಡಳಿತ ನಿರ್ವಹಣೆ ಮಾಡಿದವರು ಯಾರು?

2) ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?

3) ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

4) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

5) ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ?

**ಇ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

6) "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"

**ಈ. ಈ ಕೆಳಗಿನ ಕವಿ/ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

7) ಡಿ.ಎಸ್.ಜಯಪ್ಪಗೌಡ

| ಗದ್ಯ ಭಾಗ~04 | ಭಾಗ್ಯಶಿಲ್ಪಿಗಳು | ಅಭ್ಯಾಸ ಹಾಳೆ–02 (ವ್ಯಾಕರಣ) |
|---|---|---|

**ಅ. ಪ್ರತಿ ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿ ಉತ್ತರವನ್ನು ಆರಿಸಿ, ಬರೆಯಿರಿ.**

1) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ.

ಅ) ವಾಕ್ಯವೇಷ್ಟನ ಚಿಹ್ನೆ ಆ) ಉದ್ಧರಣ ಚಿಹ್ನೆ ಇ) ಆವರಣ ಚಿಹ್ನೆ ಈ) ಅಲ್ಪವಿರಾಮ ಚಿಹ್ನೆ

ಉತ್ತರ:~

2) 'ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು' ವಾಕ್ಯವು ಈ ಕೆಳಗಿನ ವಾಕ್ಯ ಪ್ರಕಾರಕ್ಕೆ ಸೇರಿದೆ.

ಅ) ಸಾಮಾನ್ಯವಾಕ್ಯ ಆ) ಸಂಯೋಜಿತವಾಕ್ಯ ಇ) ಮಿಶ್ರವಾಕ್ಯ ಈ) ಸಹಜವಾಕ್ಯ

ಉತ್ತರ:~

3) 'ಭೀಮನು ದುಷ್ಟನಾದ ಬಕನನ್ನು ಕೊಂದನು.' ಇಲ್ಲಿ ಗೆರೆ ಎಳೆದಿರುವ ಪದ ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಅ) ಕರ್ತೃಪದ ಆ) ಕ್ರಿಯಾಪದ ಇ) ಕರ್ಮಪದ ಈ) ಅವ್ಯಯ

**ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

4) ಸ್ಯಾನಿಟರಿ : ಇಂಗ್ಲಿಷ್ : : ದಿವಾನ : ____________

5) ಹರಿಕಾರ : ಮುಂದಾಳು : : ಸುಪರ್ದಿ : ______________

**ಇ. ಕೊಟ್ಟಿರುವ ವಾಕ್ಯಗಳನ್ನು ಓದಿ ವಾಕ್ಯದ ಪ್ರಕಾರವನ್ನು ಹೆಸರಿಸಿ.**

6) 'ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು.'

ಉತ್ತರ:~

7) 'ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾದರೂ ಸಹ ಅವರ ತಾಯಿಯವರೇ ರೀಜೆಂಟರಾಗಿ ಆಡಳಿತ ನಿರ್ವಹಣೆ ಮಾಡಿದರು.'

ಉತ್ತರ:~

8) 'ವಿಶ್ವೇಶ್ವರಯ್ಯನವರು ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತಿದ್ದರು.'

ಉತ್ತರ:~

**ಈ. ಭಾಗ್ಯಶಿಲ್ಪಿಗಳು ಗದ್ಯಭಾಗದಲ್ಲಿ ಬಂದಿರುವ ಆಂಗ್ಲಭಾಷಾ ಪದಗಳನ್ನು ಪಟ್ಟಿಮಾಡಿರಿ.**

| | | |
|---|---|---|
| | | |
| | | |
| | | |
| | | |

**ಪದ್ಯಭಾಗ~04** **ಕೌರವೇಂದ್ರನ ಕೊಂದೆ ನೀನು** **ಅಭ್ಯಾಸ ಹಾಳೆ–03**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?

______________________________

2) ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

______________________________

3) ಯಾರ್ಯಾರ ನಡುವೆ ಭೇದವಿಲ್ಲವೆಂದು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು?

______________________________

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

4) ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

______________________________

______________________________

______________________________

______________________________

**ಇ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ.**

5) "ಮಾರಿಗೌತಣವಾಯ್ತು ನಾಳಿನ ಭಾರತವು"

______________________________

______________________________

______________________________

______________________________

______________________________

**ಈ. ಈ ಕೆಳಗಿನ ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

6) ಕುಮಾರವ್ಯಾಸ :– ______________________________

______________________________

______________________________

______________________________

**ಉ. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.**

7) ಮಾರಿಗೌತಣವಾಯ್ತು ನಾಳಿನ

______________________________

______________________________

______________________________

______________________________

ವೀರರೈವರ ನೋಯಿಸೆನು ರಾಜೀವಸಖನಾಣೆ.

**ಅಥವಾ**

ಕೊರಳ ಸೆರೆ ಹಿಗ್ಗಿದವು ದೃಗಜಲ

______________________________

______________________________

______________________________

______________________________

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

**ಅ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1) ಯುದ್ಧ : ಜುದ್ಧ : : ಪ್ರಸಾದ : ________________

2) ಮುರಾರಿ : ಶ್ರೀಕೃಷ್ಣ : : ರಾಜೀವಸಖ : ______________

3) ಅನ್ವಯ : ವಂಶ : : ಕೈವಾರ : ___________________

**ಆ. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸ ಹೆಸರಿಸಿ.**

| | |
|---|---|
| 4)ಇನತನೂಜ | |
| 5)ಕೈಯಾನು | |
| 6)ಮೇದಿನೀಪತಿ | |
| 7)ಮಾದ್ರಮಾಗಧಯಾದವರು | |
| 8)ಹೊಗೆದೋರು | |

**ಇ. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ.**

9) ಮರಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ.

**ಈ. ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ.**

10) ಮಾರಿಗೌತಣವಾಯ್ತು ನಾಳಿನ ಭಾರತವು